ಪಹಣಿ ನಮೂನೆ ಹಾಗೂ ಹಾಲೋಗ್ರಾಂಗಳ ಕೊರತೆ

415(599); ಶ್ರೀ ರಾಜೀವ್ ಪಿ. (ಕುಡಚಿ)

ಅ) ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ರಾಯಭಾಗ, ಕುಡಚಿ, ಮುಗಳಖೋಡ ಮತ್ತು ಹಾರೋಗೇರಿಯಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಕಳೆದ ಒಂದು ವರ್ಷದಿಂದ ಮುದ್ರಿಸಲುಬೇಕಾದ ಪಹಣಿ, ಕಾಗದ ನಮೂನೆ ಹಾಗೂ ಹಾಲೋಗ್ರಾಂಗಳು ನಿಗದಿತ ವೇಳೆಯಲ್ಲಿ ಪೂರೈಕೆಯಾಗದೆ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಖಾಲಿ ಪಹಣಿ ಕಾಗದ ಹಾಗೂ ಹಾಲೋಗ್ರಾಂಗಳನ್ನು ಪೂರೈಸಲು ಸರ್ಕಾರಕ್ಕಿರುವ ತೊಂದರೆಯೇನು;

ಇ) ಖಾಲಿ ಪಹಣಿ ಕಾಗದ ಹಾಗೂ ಹಾಲೋಗ್ರಾಂ ತರಲು ಜಿಲ್ಲಾಧಿಕಾರಿಯ ಕಛೇರಿಗೆ ಹೋಗಬೇಕಾಗಿರುವುದರಿಂದ ದೈನಂದಿನ ಕೆಲಸ ಕಾರ್ಯಕ್ಕೆ ತೊಂದರೆಯಾಗುವುದಿಲ್ಲವೇ:

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕಳೆದ ಒಂದು ವರ್ಷದಲ್ಲಿ ಒಟ್ಟು 10,46,379 ಪಹಣಿ ಪತ್ರಿಕೆಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿರುತ್ತದೆ. ಅವುಗಳ ಪೈಕಿ ರಾಯಭಾಗ ತಾಲ್ಲೂಕಿನ ರಾಯಭಾಗ, ಕುಡುಚಿ, ಮುಗಳಖೋಡ ಮತ್ತು ಹಾರೋಗೇರಿಯಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸಾರ್ವಜನಿಕರಿಗೆ ಒಟ್ಟು 1,48,429 ಪಹಣಿ ಪತ್ರಿಕೆಗಳನ್ನು ವಿತರಿಸಲಾಗಿದೆ. ಬೆಳಗಾವಿ ಜಿಲ್ಲೆಗೆ ಕಳೆದ ಒಂದು ವರ್ಷದಲ್ಲಿ ಒಟ್ಟು 27,92,000 ಪಹಣಿ ಹಾಳೆಗಳನ್ನು ಹಾಗೂ 14,75,600 ಹಾಲೋಗ್ರಾಂಗಳನ್ನು ವಿತರಿಸಲಾಗಿರುವುದರಿಂದ ನಾಡಕಛೇರಿಗಳನ್ನು ಪಡೆಯಲು ಯಾವುದೇ ಸಮಸ್ಯೆ ಉಂಟಾಗಿರುವುದಿಲ್ಲ.

ಆ) ನಾಡಕಛೇರಿಗಳಲ್ಲಿ ಪಹಣಿ ಪತ್ರಿಕೆಗಳನ್ನು ವಿತರಿಸಲು ಅಗತ್ಯವಿರುವ ಪಹಣಿ ಹಾಳೆಗಳನ್ನು ಹಾಗೂ ಹಾಲೋಗ್ರಾಂಗಳನ್ನು ಜಿಲ್ಲೆಗಳಿಂದ ಬರುವ ಬೇಡಿಕೆಯ ಮೇಲೆ ಕೂಡಲೇ ಪೂರೈಸಲಾಗುತ್ತಿದ್ದು. ಇದರಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ ಪ್ರತಿ ನಾಡಕಛೇರಿಯಲ್ಲೂ 3 ತಿಂಗಳಿಗೆ ಅಗತ್ಯವಿರುವ ಸ್ಟೇಷನರಿ ಮತ್ತು ಹಾಲೋಗ್ರಾಂಗಳನ್ನು ಸಂಗ್ರಹಿಸಿಡಲು ನಿರ್ದೇಶನ ನೀಡಲಾಗಿರುತ್ತದೆ.

ಇ) ಪಹಣಿ ಹಾಳೆಗಳು ಮತ್ತು ಹಾಲೋಗ್ರಾಂಗಳು ಸುರಕ್ಷಿತ ಸಾಮಗ್ರಿಗಳಾಗಿದ್ದು, ಅವುಗಳು ದುರುಪಯೋಗವಾಗುವುದನ್ನು ತಪ್ಪಿಸಲು ನಾಡಕಛೇರಿಗಳಿಂದ ಬರುವ ಬೇಡಿಕೆಯ ಆಧಾರದ ಮೇಲೆ ಅವುಗಳನ್ನು ರಾಜ್ಯಮಟ್ಟದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ವಿತರಿಸಲಾಗುವುದು ಹಾಗೂ 3 ತಿಂಗಳಿಗೆ ಬೇಕಾಗುವಷ್ಟನ್ನು ಒಮ್ಮೆಲೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪಡೆದು ಶೇಖರಿಸಿಟ್ಟುಕೊಳ್ಳಲು ಎಲ್ಲಾ ನಾಡಕಛೇರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ, ನಾಡಕಛೇರಿಗಳು ಪಹಣಿ ಹಾಳೆಗಳನ್ನು ಮತ್ತು ಹಾಲೋಗ್ರಾಂಗಳನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪಡೆದು ನಾಗರೀಕರಿಗೆ ನೀಡುವ ಸೇವೆಯ ದೈನಂದಿನ ಕಾರ್ಯಗಳಿಗೆ ತೊಂದರೆಯಾಗದಂತೆ ಪಹಣಿ ಪತ್ರಿಕೆಗಳನ್ನು ವಿತರಿಸಲಾಗುತ್ತಿದೆ.